ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp.123-126.
©*IIMRD*, Mysuru
IIMRD JOURNALS
www.iimrd.com

# ಲಂಬಾಣಿ ಲೇಖಕರಾದ ಬಿ.ಟಿ. ಲಲಿತಾ ನಾಯಕರವರ ಜೀವನ ಮತ್ತು ಸಾಧನೆ

**ಢಾಕಪ್ಪ ಮೋತಿಲಾಲ**
ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಗುಲ್ಬರ್ಗ ವಿಶ್ವವಿಶ್ವದ್ಯಾಲಯ, ಕಲ್ಬುರ್ಗಿ.

## ಸಾರಾಂಶ (Abstract)

ಬಿ.ಟಿ. ಲಲಿತಾ ನಾಯಕರವರು ಕನ್ನಡದ ಮಹಿಳಾ ಬಂಡಾಯ ಸಾಹಿತಿಗಳಲ್ಲಿ ಪ್ರಮುಖರು. ಇವರ ಕಥೆ ಕಾದಂಬರಿ, ನಾಟಕಗಳೆಲ್ಲದರಲ್ಲಿ ಜಾತಿಯತೆ ಮಹಿಳೆಯರ ಶೋಷಣೆ ಬಂಡಾಯದ ಧ್ವನಿ, ದಲಿತರ ನೋವುಗಳಿವೆ. ಸಂಘಟಕರಾಗಿ ಗಮನ ಸೆಳಿದಿದ್ದಾರೆ. ಸಾಮಾಜಿಕ ಕಳಕಳಿ ಕಾಳಜಿಯನ್ನು ಹೊಂದಿದ್ದಾರೆ. ಇವರು ಲಂಕೇಶ ಪತ್ರಿಕೆಯಲ್ಲಿ 1982ರಿಂದ ದುಡಿದ ಇವರ ಅನೇಕ ಲೇಖನ, ಕಥೆ, ಕವನಗಳು ಆ ಪತ್ರಿಕೆಯಲ್ಲಿ ಪ್ರಕಟಗೊಂಡವು. ಇವರು ರಚಿಸಿದ ನಾಟಕಗಳು ಧಾರವಾಡದ ಬಾನುಲಿ ಕೇಂದ್ರದಿಂದ ಪ್ರಸಾರವಾಗಿವೆ. 1986ರಲ್ಲಿ ರಾಮಕೃಷ್ಣ ಹೆಗಡೆಯವರ ಆಹ್ವಾನದ ಮೇರೆಗೆ ರಾಜಕೀಯ ಪ್ರವೇಶ ಮಾಡಿದರು. 1986 ರಿಂದ 1992ರವರೆಗೆ ಕರ್ನಾಟಕ ವಿಧಾನ ಪರಿಷತ್ ಸದಸ್ಯೆಯಾಗಿ 1994 ರಿಂದ 1996ರವರೆಗೆ ವಿಧಾನಸಭೆಯಲ್ಲಿ ಮಂತ್ರಿಯಾಗಿ ರಾಜಕೀಯ ವ್ಯವಹಾರ ಸಮಿತಿ ಸದಸ್ಯೆಯಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ಪ್ರಮುಖ ಹುದ್ದೆಗಳಲ್ಲಿ ಕಾರ್ಯಾ ನಿರ್ವಾಹಿಸಿದ್ದಾರೆ. ಪ್ರಸ್ತುತ ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

**ಮುಖ್ಯಪದಗಳು (Keywords):** ಲಂಬಾಣಿ, ಬುಡಾಕಟ್ಟು, ಜೀವನ, ಸಾಧನೆ, ಬಿ.ಟಿ. ಲಲಿತಾ ನಾಯಕ.

### ಪೀಠಿಕೆ

ಕರ್ನಾಟಕದ ಅನೇಕ ಬುಡಕಟ್ಟಿನ ಜನಾಂಗಗಳಲ್ಲಿ ಲಂಬಾಣಿ ಜನಾಂಗ ಎದ್ದು ಕಾಣುತ್ತದೆ. ಮೂಲತ: ಭಾರತದ ರಾಜಸ್ಥಾನ ಮೂಲದವರಾದ ಇವರು ಇತರ ಬೇರೆ ಬೇರೆ ಕಾರಣಗಳಿಂದ ದೇಶದ ಬೇರೆ ಬೇರೆ ರಾಜ್ಯಗಳಿಗೆ ಪಸರಿಸಿದರು. ತಪ್ಪದೇ ತಮ್ಮದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿದ ಇವರು ಊರುಗಳಿಂದ ದೂರ ಉಳಿದು ಕಾಡಿನಲ್ಲಿ ತಮ್ಮದೆ ಒಂದು ತಾತ್ಕಾಲಿಕ ಮನೆ ಕಟ್ಟಿಕೊಂಡು ವಾಸವಾಗಿದ್ದರು. ಅಲೆಮಾರಿ ಜೀವನ ಬಿಟ್ಟು ಒಂದೆ ಕಡೆ ನೆಲೆ ನಿಂತು ತಮ್ಮ ಜೀವನ ರೂಪಿಸಿಕೊಂಡರು. ಬಡತನ ಪರಸ್ಥಿತಿ ಇದ್ದರೂ ಸಹ ಅದನೆಲ್ಲಾ ಲೆಕ್ಕಿಸದೆ ಛಲದಿಂದ ಓದಿ ಮುಂದೆ ಬಂದು ಸಾಹಿತ್ಯ ಕ್ಷೇತ್ರದಲ್ಲಿ ಮಹಾನ್ ಸಾಧನೆ ಮಾಡಿದಂತೆ ಅನೇಕ ಲೇಖಕರಲ್ಲಿ ಈ ಲಂಬಾಣಿ ಲೇಖಕರು ಕೂಡಾ ಇದ್ದಾರೆ. ಇವರಲ್ಲಿ ಕನ್ನಡ ಸಾಹಿತ್ಯಕ್ಕೆ ತಮ್ಮದೆ ಆದ ಗಣನೀಯ ಸೇವೆ ಸಲ್ಲಿಸಿದ ಪ್ರಮುಖ ಲಂಬಾಣಿ

*Please cite this article as: ಢಾಕಪ್ಪ ಮೋತಿಲಾಲ. (2022). ಲಂಬಾಣಿ ಲೇಖಕರಾದ ಬಿ.ಟಿ. ಲಲಿತಾ ನಾಯಕರವರ ಜೀವನ ಮತ್ತು ಸಾಧನೆ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.123–126.*

ಲೇಖಕರಾದ ಬಿ.ಟಿ. ಲಲಿತಾ ನಾಯಕರ ಪರಿಚಯ ಹಾಗೂ ಅವರ ಸಾಧನೆ ಬಗ್ಗೆ ತಿಳಿದುಕೊಳ್ಳುವುದು ತುಂಬಾ ಸೂಕ್ತವಾಗಿದೆ. ಅವರ ಜೀವನ, ನಡೆದು ಬಂದ ದಾರಿ ಹಾಗೂ ಸಾಹಿತ್ಯದಲ್ಲಿ ಮಾಡಿದಂತಹ ಸಾಧನೆಯ ಬಗ್ಗೆ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ.

**ಶ್ರೀಮತಿ ಬಿ.ಟಿ.ಲಲಿತಾ ನಾಯಕ**

"ಶ್ರೀಮತಿ ಬಿ.ಟಿ.ಲಲಿತಾನಾಯಕರವರು ಮೊದಲನೆಯ ತಲೆಮಾರಿಗೆ ಸೇರಿದ ಸಾಹಿತಿಗಳಾಗಿದ್ದಾರೆ. ಬಡತನ ಪರಸ್ಥಿತಿಯಲ್ಲಿಯೂ ಶಿಕ್ಷಣ ಪಡೆದು ಉನ್ನತ ಮಟ್ಟಕ್ಕೆ ಬಂದು ಸಮಾಜ್ಯದಲ್ಲಿ ಇಂದು ಮಾದರಿಯಾಗಿದ್ದಾರೆ. ಯಾಕೆಂದರೆ. ಅಲೆಮಾರಿ ಜನಾಂಗಗಳಾಗಿದ್ದ ಬಂಜಾರಾರು ಹೊಟ್ಟೆ–ಪಾಡಿಗಾಗಿ ರಾಜ್ಯದಿಂದ–ರಾಜ್ಯಕ್ಕೆ ಸ್ಥಳದಿಂದ ಸ್ಥಳಕ್ಕೆ ಬದುಕಿಗಾಗಿ ಹೋರಾಟ ಮಾಡುತ್ತಾ ಸಾಗುತಿದ್ದರು. ಅಂತ್ತಹವರಲ್ಲಿ ಲಂಬಾಣಿ ಜನಾಂಗದ ಭಾಷೆಗೆ ಲಿಪಿಯೇ ಇಲ್ಲ. ಬರೆ ಮೌಖಿಕವಾಗಿದೆ. ಯಾವ ರಾಜ್ಯದಲ್ಲಿ ವಾಸವಾಗುತ್ತಾರೋ ಅಂತಹ ರಾಜ್ಯದ ಭಾಷೆಯಲ್ಲಿ ಅಥವಾ ಆ ರಾಜ್ಯದ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಬೇಕಾಗುತಿತ್ತು. ಆಂದಿನ ಸಂದರ್ಭದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಪಡೆಯುವುದು ತೀರಾ ದುಸ್ತರವಾಗಿತ್ತು. ಇಂತಹ ಕೆಟ್ಟ ಪರಸ್ಥಿತಿಯಲ್ಲಿ ಲಂಬಾಣಿ ಜನಾಂಗದ ಸಾಹಿತಿಗಳು ಸಮಾಜ್ಯದಿಂದ ಎಚ್ಚೆತ್ತುಕೊಂಡು ಶಿಕ್ಷಣ ಪಡೆಯುವಂತಾಯಿತು.

ಅಂತಹದರಲ್ಲಿ ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಉನ್ನತವಾದ ಶಿಕ್ಷಣ ಪಡೆದು ಅದರಲ್ಲಿ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿ ಸಾಹಿತ್ಯದ ಬಗ್ಗೆ ಆಸಕ್ತಿ, ಮೂಡಿಸಿಕೊಂಡು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ, ಕಾವ್ಯ, ಕಥೆ, ಕಾದಂಬರಿ, ಕವನ ಸಂಕಲನ ಬರೆಯುವುದರ ಮೂಲಕ ಲಂಬಾಣಿ ಲೇಖಕ/ಲೇಖಕಿಯರ ಸಾಲಿನಲ್ಲಿ ಮೊದಲನೆಯ ತಲೆಮಾರಿಗೆ ಸೇರಿದವರಾಗಿದ್ದಾರೆ. ಅವರ ಜೀವನ ಮತ್ತು ಸಾಧನೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ ರವರ 04–04–1945ರಲ್ಲಿ ಜನಸಿದರು. ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳರಡಲ್ಲಿಯೂ ಅಸಾಧರಣ ಸಾಧನೆ ಮಾಡಿದ ಶ್ರೀಮತಿ ಬಿ.ಟಿ.ಲಲಿತಾ ನಾಯಕರವರು ಹುಟ್ಟಿದ್ದು "ಚಿಕ್ಕಮಂಗಳೂರಿನ ಅಥವಾ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ "ತಂಗಲಿ" ತಾಂಡಾದಲ್ಲಿ ಜನಿಸಿದರು. ತಂದೆ ಬಾಲಾಜಿ ನಾಯಕ ತಾಯಿ ಗಂಗಾಬಾಯಿ, ಏಕೋಪಾಧ್ಯಾಯ ಶಾಲೆ ತಾಂಡಾದಲ್ಲಿ 4ನೇ ತರಗತಿಯವರೆಗೆ ಓದಿದರು. ನಂತರ ಚಿತ್ರದುರ್ಗಾದಲ್ಲಿ ಎಂಟನೆಯ ತರಗತಿಯವರಿಗೆ ವಿದ್ಯಾಭ್ಯಾಸ ಮಾಡಿದರು. ಅವಕಾಶಗಳು ಇಲ್ಲದರಲ್ಲಿಯೂ ತಂದೆ ಮತ್ತು ಅಣ್ಣನ ಪ್ರೋತ್ಸಾಹದಿಂದ ಪ್ರೌಢಶಾಲೆ ಮುಗಿಸಿದರು. ಆ ಮೇಲೆ ಮನೆಯಲ್ಲಿಯೇ ವಿದ್ಯಾಭ್ಯಾಸ ಕಲಿತಿದ್ದು ಸಂಸ್ಕೃತ, ಇಂಗ್ಲೀಷ್ ಹಾಗೂ ಹಿಂದಿ ಭಾಷೆ ಕಲಿತರು. ಬಿ.ಎ. ಓದುತ್ತಿದ್ದು ಅಣ್ಣ ಪ್ರತಿವಾರ 30 ಕಿ.ಮೀ. ದೂರದ ಚಿಕ್ಕಮಂಗಳೂರಿಂದ ಹಳ್ಳಿಗೆ ಬಂದು ತಂಗಿ ಕಲಿಸಿದ ವಿದ್ಯೆ, ಹಿಂದಿ ಪರೀಕ್ಷೆಯಲ್ಲಿ ವಿಶಾರದವನ್ನು ಪಡೆದರು. ಇವರು ರಚಿಸಿದ ನಾಟಕಗಳು ಧಾರವಾಡದ ಆಕಾಶವಾಣಿ ಕೇಂದ್ರದಿಂದ ಪ್ರಸಾರ ಮಾಡಲಾಯಿತು. 1982ರಲ್ಲಿ ಲಂಕೇಶ ಪತ್ರಿಕೆಯ ವರದಿಗಾರ್ತಿಯಾಗಿಯೂ 6 ವರ್ಷ ಕಾರ್ಯ ಮಾಡಿಗಳಿಸಿದ ಅನುಭವ. 1989ರಲ್ಲಿ ರಾಮಕೃಷ್ಣ ಹೆಗ್ಡೆಯವರ ಆಹ್ವಾನದಿಂದ ರಾಜಕೀಯ ಪ್ರವೇಶ

1986ರಲ್ಲಿ (1986 ರಿಂದ 1992ರವರೆಗೆ ವಿಧಾನ ಪರಿಷತ್ ಸದಸ್ಯೆಯಾಗಿ 1994 ರಿಂದ 1999ರವರೆಗೆ ವಿಧಾನಸಭೆ ಸಚಿವೆಯಾಗಿ ಕಾರ್ಯನಿರ್ವಹಿಸಿದರು.

**ಪ್ರಕಟಿತ ಕೃತಿಗಳು**

ಚಂದ್ರಪರಾಭವ (ನಾಟಕ ಸಂಕಲನ), ಭಟ್ಟನ ಕನಸು, (ಮಕ್ಕಳ ಕಥಾಸಂಕಲನ) ನೆಲೆ, ಬೆಲೆ, ಗತಿ, (ಕಾದಂಬರಿ) ಹಬ್ಬ ಮತ್ತು ಬಲಿ, (ಕಥಾ ಸಂಕಲನ) ನಂರೂಪ್ಲಿ ಇದೆ ಕೂಗು ಮತ್ತೆ–ಮತ್ತೆ, ಒಡಲಬೇಗ, ಬಿದಿರುಮಳೆ ಕಂಟಿಯಲ್ಲಿ ಸೇವಾಸೇರು (ಕವನ ಸಂಕಲನ) ಚುಟುಕುಗಳ, ಸಂಕಲನ ಪ್ರಕಟಿತ, ಗತಿ ಕಾದಂಬರಿ, ಕರ್ನಾಟಕ ವಿಶ್ವವಿದ್ಯಾಲಯದ 3ನೇ ವರ್ಷದ ಬಿ.ಎ. ತರಗತಿಗೆ ಹಬ್ಬ ಮತ್ತು ಬಲಿ, ಕಥಾಸಂಕಲನ ಗುಲಬರ್ಗಾ ವಿಶ್ವವಿದ್ಯಾಲಯದ ಎಂ.ಎ. ತರಗತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಥಮ ಕಲಾ ತರಗತಿಗೆ ಪಠ್ಯಪುಸ್ತಕ, ಕಾವ್ಯ, ಸಂಗಮಕ್ಕೆ 8 ಕವನಗಳು, ಸೇರ್ಪಡೆಯಾಗಿ ಪಠ್ಯ ಪುಸ್ತಕಗಳಾಗಿವೆ.

**ಸಂದ ಪ್ರಶಸ್ತಿ ಗೌರವಗಳು**

ಹಲವಾರು ಉತ್ತಮ ಶಾಸಕಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜೀವಗಾಂ, ಏಕತಾ ಪ್ರಶಸ್ತಿ, ಶ್ರೀಮತಿ ಸಾವಿತ್ರಮ ದೆ.ಜೆ.ಗೌ ಮಹಿಳಾ ಪ್ರಶಸ್ತಿ, ನಾಡ ಚೇತನ ಪ್ರಶಸ್ತಿ, ಮಹಿಳಾರತ್ನ ಪ್ರಶಸ್ತಿ, ಕಿರಣಪ್ರಭಾ ಪ್ರಶಸ್ತಿ, ಕಾಯಕ ಸಮ್ಮಾನ ಪ್ರಶಸ್ತಿ, ಸಮಾಜ ಸೇವಾರತ್ನ ಪ್ರಶಸ್ತಿ ಮೊದಲುಗೊಂಡು ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಸೇವೆಗಾಗಿ ಸಂದ ಪ್ರಶಸ್ತಿಗಳಲ್ಲಿ ಪ್ರಮುಖವಾದವುಗಳು.

**ಉಪಸಂಹಾರ**

ಬಂಡಾಯ ಕಾದಂಬರಿಕಾರರಾದ ಇವರು ತಮ್ಮ ಜನರ ನೈಜ ಬದುಕನ್ನು ಕಟ್ಟಿಕೊಡುವಾಗ ಬಳಸಿಕೊಂಡ ತಂತ್ರಗಳು ವಿಭಿನ್ನವಾಗಿವೆ. ಅಂತಹದರಲ್ಲಿ ಬಿ.ಟಿ.ಲಲಿತಾ ನಾಯಕರವರು ಕಥೆ, ಕಾದಂಬರಿಯುದ್ದಕ್ಕೂ ದಲಿತರ ಹೆಣ್ಣು ಮಕ್ಕಳು ಸಮಾಜದಲ್ಲಿರುವ ಅನಿಷ್ಠ ಪದ್ಧತಿ ಶೋಷಣೆಗಳಿಗೆ ಒಳಾಗಾಗಿ ತಮ್ಮ ಬದುಕಿನ ಉದ್ದಗಲಕ್ಕು ನೋವುಗಳನ್ನು ಅನುಭವಿಸಿ ದು:ಖಕರವಾದ ಜೀವನವನ್ನು ಸಾಗಿಸುತ್ತಿದ್ದರು. ಅಂತಹ ಶೋಷಿತ ಹೆಣ್ಣು ಮಕ್ಕಳ ಚಿತ್ರಣವನ್ನು ಬಿ.ಟಿ.ಲಲಿತಾ ನಾಯಕರವರು ಬಹಳ ಸ್ಪಷ್ಠಿಕರಣ ಚಿತ್ರಣ ನೀಡಿದ್ದಾರೆ.

ಬಂಡಾಯ ಲೇಖಕರ ಒಟ್ಟಾರೆ ಕೂಗು ಶೋಷಿತರನ್ನು ಶೋಷಿತ ವರ್ಗದಿಂದ ಮುಕ್ತಗೊಳಿಸುವುದು. ಈ ರೀತಿಯಾಗಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಾಟಕ, ಸಂಕಲನ ಮತ್ತು ಕಥಾ ಸಂಕಲನ ಕಥೆ, ಕಾದಂಬರಿ, ಚುಟುಕು ಸಂಕಲನ ಈ ರೀತಿಯಾಗಿ ಹಲವಾರು ರೀತಿಯಿಂದಲು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಅಷ್ಟೇ ಅಲ್ಲದೆ ರಾಜಕೀಯ ಕ್ಷೇತ್ರದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ಜೀವನದುದ್ದಕ್ಕು ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಹರಿಲಾಲ ಪವಾರ. (2007). ಬದುಕೊಂದು ಚಿತ್ತಾರ. ಮುದ್ರಕರು: ಡಾ. ಹೆಚ್.ಎಂ. ಮಹೇಶ್ವರಯ್ಯ ನಿರ್ದೇಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಬಿ.ಟಿ. ಲಲಿತಾ ನಾಯಕ. (1997). ಬಿದಿರು ಮೆಳೆ ಕುಂಟಿಯಲ್ಲಿ. ಮುದ್ರಣ: ಅಂಕಿತಾ ಎಂಟರ್‌ಪ್ರೈಸಸ್, ಬೆಂಗಳೂರು.
- ಕೃಷ್ಣನಾಯಕ. (2005). ಲದೇಣಿಯ. ವಿಶ್ವಾಸ ಪ್ರಿಂಟ್ಸ್, ಬೆಂಗಳೂರು.